ಶ್ರೀ ಬಿ.ವಿ. ಕಕ್ಕಿಲಾಯ.— ಸ್ವಾಮಿ, ಈ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಅಭ್ಯರ್ಥಿಗಳಿಗೆ ಇಷ್ಟು ಸೀಟುಗಳನ್ನು ಕಾದಿರಿಸಬೇಕೆಂದು ತಾವು ತಿಳಿಸಿದ್ದೀರಿ. ಅದರ ಪ್ರಕಾರ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಕೆಲವು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಇಟ್ಟುಕೊಂಡಿದ್ದಾರೆ. ಅದರಲ್ಲಿ ಖಾಲಿ ಇರುವ ಸ್ಥಾನಕ್ಕೆ ಅವರನ್ನು ಬಿಟ್ಟು ಬೇರೆಯವರನ್ನು ತೆಗೆದುಕೊಳ್ಳುವುದಕ್ಕೆ ಬರಂವುದಿಲ್ಲವೆಂಬ ಕಾರಣದಿಂದ ಈ ರೆಕ್ರೂಟ್‌ಮೆಂಟ್‌ನಲ್ಲಿ ತಡವಾಗಿದೆ ಎಂದು ತಿಳಿದು ಬಂದಿದೆ. ತಾವು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

SRI B. SUBBAYYA SHETTY.— It has not come to the notice of the Government, Sir

Moodabidri-Belvai Road in S.K.

589. DR. DAMODAR MULKY (Moodabidri). — Will the Minister for Public Works be pleased to state :-

(*a*) when the R.C. (rural communication) road Mooder Mamad-Amandttu Baleyar Pademamad road of Karkal Taluk, Dakshina Kannada was sanctioned ;

(b) what is the length of the road and how much amount is sanctioned for this road ;

(*c*) how much amount is spent so far ;

(*d*) whether the road is completed ?

SRI S. BANGARAPPA (Minister for Public Work).—

(*a*) The correct nomenclature of the road is "Moodabidri Belvai "road to join Daregudde Valapady road" through Ammanottu, Bakimar.

Phase-I of this work was sanctioned during November 1972.
Phase-II was sanctioned during 1977-78.

(b) (1) The length of the road is 8.00 Kms.
(2) The total amount of estimates sanctioned is Rs. 1,96,000.

(*c*) Rs 98,602.

(*d*) No.

ಶ್ರೀ ದಾಮೋದರ ಮುಲ್ಕಿ.— ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ--ಜೆಲ್ಲಾಯಿಂ ರಸ್ತೆ ಕಾಮಗಾರಿ ಕೆಲಸದ ಮೊದಲನೇ ಹಂತವನ್ನು ೧೯೭೨ನೇ ಇಸವಿಯ ನವೆಂಬರ್ ತಿಂಗಳಲ್ಲಿ ಮುಗಿಸಿದ್ದೇವೆಂದು ಹೇಳಿದ್ದೀರಿ. ಇನ್ನು ಎರಡನೇ ಹಂತದ ಕಾಮಗಾರಿ ಕೆಲಸವನ್ನು ೧೯೭೮ ರವರೆಗೂ ಮಾಡಿಲ್ಲ. ಇದರಲ್ಲಿ ತಡವಾಗಿರುವುದಕ್ಕೆ ಕಾರಣವೇನು ?

†ಶ್ರೀ ಎಸ್. ಬಂಗಾರಪ್ಪ.— ಮೊದಲನೇ ಹಂತದ ಕೆಲಸವನ್ನು ೧೯೭೨ನೇ ಇಸವಿ ನವೆಂಬರ್‌ನಲ್ಲಿ ಮಂಜೂರು ಮಾಡಲಾಗಿದೆ ಎಂಬುದಾಗಿ ಹೇಳಲಾಗಿದೆ. ಮತ್ತು ಎರಡನೇ ಹಂತದ ಕೆಲಸವನ್ನು ೧೯೭೭–೭೮ರ ಅವಧಿಯಲ್ಲಿ ಮಂಜೂರು ಮಾಡಲಾಗಿದೆ ಎಂಬುದಾಗಿ ಹೇಳಲಾಗಿದೆ. ಇದಕ್ಕೆ ಕಾರಣ ನಮಗೆ ಹಣ ಸಿಕ್ಕಿದಾಗ ಹಂತ ಹಂತವಾಗಿ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಇದು ಐ.ಸಿ.ಆರ್.ಸಿ. ಪ್ಲೊ ಗ್ರಾಂ ಮೇಲೆ ತೆಗೆದುಕೊಂಡಿರುವ ರಸ್ತೆಯ ಕೆಲಸವಾದ್ದರಿಂದ ಹಂತ ಹಂತವಾಗಿ ಕೆಲಸವನ್ನು ತಗೆದುಕೊಳ್ಳಲಾಗುತ್ತಿದೆ.

ಶ್ರೀ ದಾಮೋದರ್ ಮುಲ್ಕಿ.— ಮೊದಲನೆ ಹಂತದ ಕೆಲಸಕ್ಕೆ ಅಂದರೆ ೮ ಕಿಲೋಮೀಟರ್ ರಸ್ತೆಯನು ಮಾಡಲು ೯೮,೬೦೨–೦೦ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂಬುದಾಗಿ ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ನಾನು ಕಳೆದ ಎರಡು ತಿಂಗಳ ಹಿಂದೆ ಆ ಪ್ರದೇಶಕ್ಕೆ ಹೋಗಿದ್ದಾಗ ನೋಡಿದ್ದೇನೆ. ಅಲ್ಲಿ ಎರಡು ಕಿಲೋಮೀಟರ್ ರಸ್ತೆಯನ್ನು ಮಾತ್ರ ರಿಪೇರಿ ಮಾಡಿದ್ದಾರೆ. ಇನ್ನುಳಿದಿದ್ದನ್ನು ಮಾಡಿಲ್ಲ. ಆದ್ದರಿಂದ ೯೮,೬೦೨ ರೂಪಾಯಿಗಳನ್ನು ಇದಕೆ ನಿಜವಾಗಿಯೂ ಖರ್ಚು ಮಾಡಿದ್ದಾರೆಯೆ ? ಎಂಬುದನ್ನು ತಮ್ಮ ಇಲಾಖೆಯ ಉನ್ನತಾಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ಮಾಡಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಮೊದಲನೆ ಹಂತಕ್ಕೆ ಖರ್ಚಾಗಿರತಕ್ಕಂಥ ಹಣ ೩೧ನೇ ಆಗಸ್ಟ್ ೧೯೭೨ರ ಸರ್ಕಾರಿ ಆಜ್ಞೆಯ ಪ್ರಕಾರ ಫಸ್ಟ್ ಪೇಜ್ ವರ್ಕಿಗೆ ೭೫ ಸಾವಿರ ರೂಪಾಯಿಗಳು ಹಣ ಮಂಜೂರಾಗಿದೆ. ಅದರಲ್ಲಿ ೨ ಕಿಲೋಮೀಟರ್ ರಸ್ತೆಯನ್ನು ಮಾತ್ರ ಮಾಡಿದ್ದಾರೆ ಉಳಿದಿರತಕ್ಕಂಥಾದ್ದನ್ನು ಮಾಡಿಲ್ಲ ಎಂಬುದಾಗಿ ತಾವು ಏನು ಹೇಳಿದ್ದೀರಿ. ಅದಕ್ಕೆ ಹಲವಾರು ಕಾರಣಗಳಿವೆ, ತಮಗೆ ಗೊತ್ತಿರುವ ಹಾಗೆ ಇದು ಐ.ಸಿ.ಆರ್.ಸಿ. ಪ್ರೋಗ್ರಾಂನ ಕೆಳಗೆ ಬರತಕ್ಕಂಥಾದ್ದು. ಆ ಭಾಗದಲ್ಲಿ ಬರತಕ್ಕಂಥ ಭೂಮಿಯ ಮಾಲಿಕರು ಭೂಮಿಯನ್ನು ಪುಕ್ಕಟೆಯಾಗಿ ಬಿಟ್ಟುಕೊಡಬೇಕು. ಲ್ಯಾಂಡ್ ಆಕ್ವಿಜಿಷನ್ ಪ್ರೊಸಿಡಿಂಗ್ಸ್ ಇನ್ಸಿಯೇಟ್ ಮಾಡಲಾಗಿದೆ. ಅದಕ್ಕೋಸ್ಕರ ಹಣವನ್ನೂ ಸಹ ಖರ್ಚು ಮಾಡಲಾಗಿದೆ. ಮತ್ತೆ ಎರಡು ಕಿಲೋಮೀಟರ್ ರಸ್ತೆಯನ್ನು ಮಾಡಿದ್ದಾರೆ ಉಳಿದದ್ದನ್ನು ಮಾಡಿಲ್ಲ. ಅದಕೆ ೯೮,೬೦೨ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ? ತಾವು ಏನು ಹೇಳಿದ್ದೀರಿ, ಆ ವಿವರ ನನ್ನ ಹತ್ತಿರ ಇಲ್ಲ. ಒಂದು ವೇಳೆ ಅನ್ಯಾಯವಾಗಿ ಖರ್ಚಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೆ ಆ ವಿವರಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ದಾಮೋದರ್ ಮುಲ್ಕಿ.— ನಮ್ಮಲ್ಲಿ ಮೊದಲೇ ನೆರೆ ಹಾವಳಿ ಹೆಚ್ಚಾಗಿ ಇರುವುದರಿಂದ ಮಣ್ಣಿನ ರಸ್ತೆಯನ್ನು ಮಾಡುವುದರಿಂದ ಯಾವ ಪ್ರಯೋಜನವೂ ಇರುವುದಿಲ್ಲ. ನೆರೆ ಬಂದಾಗ ಎಲ್ಲವೂ ಹೊರಟು ಹೋಗುತ್ತದೆ. ಆದರಲ್ಲೂ ಕೂಡ ಮೊದರ್ ಮಾಮದ್– ಆಮಂದತ್ತು ಬಲಿಯಾರೆ ಪಡಿಮಾಮದ್ ಗ್ರಾಮಗಳ ರಸ್ತೆಗೆ ಹೆಚ್ಚಿನ ಹಣವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ

ಶ್ರೀ ಎಸ್. ಬಂಗಾರಪ್ಪ. – ನಾನು ಈ ಮಾತನ್ನು ಪದೇಪದೇ ಈ ಸದನದಲ್ಲಿ ಈಗಾಗಲೇ ಹೇಳಿದ್ದೇನೆ. ಬೇರೆ ಬೇರೆ ಹಂತದ ರಸ್ತೆಗಳಿರುತ್ತವೆ. ಉದಾಹರಣೆಗೆ ಹೇಳುವುದಾದರೆ, ಐ.ಸಿ.ಆರ್.ಸಿ. ರಸ್ತೆ, ಎಂ.ಡಿ.ಆರ್. ರಸ್ತೆ, ಹಾಗೂ ರಾಷ್ಟ್ರೀಯ ಹೆದ್ದಾರಿ ಇವುಗಳನ್ನು ಮಾಡಬೇಕಾದರೆ ಹಣ ಹೆಚ್ಚಿಗೆ ಬೇಕಾಗುತ್ತದೆ. ಮಾನ್ಯ ದಾಮೋದರ ಮುಲ್ಕಿಯವರು ಹೇಳಿದಹಾಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಹಾವಳಿ ಹೆಚ್ಚಾಗಿ ಇರುವುದರಿಂದ ಈ ಸಾರಿ ೩೧ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ಅದನ್ನು ಸರಿಪಡಿಸಬೇಕಾದರೆ ಟಾರ್ ರಸ್ತೆಯನ್ನು ಮಾಡಿಸಬೇಕು. ಅದನ್ನು ಮಾಡಬೇಕಾದುದು ಅತ್ಯಂತ ಅವಶ್ಯಕವು ಹೌದು. ಅದೇ ರೀತಿ ಬ್ಲಾಕ್ ಕಾಟನ್ ಸಾಯಿಲ್ ಪ್ರದೇಶದಲ್ಲಿ ರಸ್ತೆ ಮಾಡುವುದಕ್ಕೆ, ಮತ್ತೆ ಹೆಚ್ಚಿಗೆ ಮರಾಳು ಮಿಶ್ರಿತ ಪ್ರದೇಶದಲ್ಲಿ ರಸ್ತೆ ಮಾಡುವುದಕ್ಕೆ, ಹೆಚ್ಚಿಗೆ ಹಣ ಬೇಕಾಗುತ್ತದೆ. ಇದರ ಬಗ್ಗೆ ನನ್ನ ಆಲಾಖೆಯ ಬೇಡಿಕೆಗೆ ಉತ್ತರವಾಗಿ ಹೇಳುತ್ತಾ ಇದರ ಬಗ್ಗೆಯೂ ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಿ ಆದಕ್ಕೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಡುವುದಾದರೆ ಈ ತರಹ ತೊಂದರೆಯನ್ನು ಪರಿಹರಿಸಬಹುದು ಎಂಬುದಾಗಿ ಹೇಳಿದ್ದೇನೆ. ಆ ಮಾಸ್ಟರ್ ಪ್ಲಾನಿಗೆ ತಾವೆಲ್ಲರೂ ಒಪ್ಪಿಗೆ ಕೊಡಿದ್ದರೆ ಈಗ ಇರತಕ್ಕಂಥ ತೊಂದರೆಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಮಾತನ್ನೂ ಕೂಡ ಹೇಳಿದ್ದೇನೆ. ಆದರೆ ಈಗ ಮಾಸ್ಟರ್ ಪ್ಲಾನ್ ತಯಾರು ಮಾಡುವ ಕಾರ್ಯ ಪ್ರಾರಂಭವಾಗಿದೆ. ಯಾವ ಯಾವ ಭಾಗದಲ್ಲಿ ಹೆಚ್ಚಿನ ಅವಶ್ಯಕತೆ ಇದೆ ಎಂಬುದನ್ನು ನೋಡಿಕೊಂಡು ಆದಕ್ಕನು ಸಾರವಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ದಾಮೋದರ್ ಮುಲ್ಕಿ.— ಈ ಎರಡೂ ಗ್ರಾಮಕ್ಕೂ ರಸ್ತೆ ಇಲ್ಲ. ಇದರಿಂದ ಆ ಹಳ್ಳಿಗಳಲ್ಲಿ ರತಕ್ಕಂಥ ಹರಿಜನ–ಗಿರಿಜರಿಗೆ ಓಡಾಡುವುದಕ್ಕೆ ಬಹಳ ಕಷ್ಟವಾಗಿದೆ. ಎರಡನೆ ಹಂತಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಈಗಾಗಲೇ ಮಂಜೂರು ಮಾಡಿ ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಿಕೊಡುವುದಕ್ಕೆ ತಮ್ಮ ಇಲಾಖೆಯವರಿಗೆ ಆದೇಶವನ್ನು ನೀಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.— ಈಗಾಗಲೇ ಮೊದಲನೆ ಹಂತದ ಕೆಲಸಕಾ ಗಿ ೭೫ ಸಾವಿರ ರೂಪಾಯಿ ಗಳು ಮತ್ತು ಎರಡನೆ ಹಂತಕ್ಕೆ ೩೩,೫೦೦ ರೂಪಾಯಿಗಳನ್ನು ೩೧ನೇ ಆಗಸ್ಟ್ ೧೯೭೨ರ ಸರ್ಕಾರ ಆಜ್ಞೆ ಪ್ರಕಾರ ಮಂಜೂರು ಮಾಡಲಾಗಿದೆ. ಆದರೆ ಈಗ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಒಂದೊಂದು ಕಿಲೋಮೀಟರ್‌ಗೂ ೨೦-೨೫ ಸಾವಿರ ರೂಪಾಯಿಗಳು ಹೆಚ್ಚಿಗೆ ಖರ್ಚಾಗುತ್ತಿವೆ. ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಗ್ರಾವಲರಿ ಸಾಯಿಲ್‌ನಲ್ಲಿ ೨೨ ಸಾವಿರ ರೂಪಾಯಿಗಳು ಇದ್ದುದು. ಈಗ ೪೪ ಸಾವಿರ ರೂಪಾಯಿಗಳಾಗಿದೆ. ಮತ್ತು ಸಾಧಾರಣ ಭೂಮಿಯಲ್ಲಿ ೨೪ ಸಾವಿರ ರೂಪಾಯಿಗಳು ಇದ್ದುದು, ಈಗ ೪೯ ಸಾವಿರ ರೂಪಾಯಿಗಳಾಗಿವೆ. ಇನ್ನೆತ್ತೆ ಬ್ಲಾಕ್ ಕಾಟನ್ ಸಾಯಿಲ್‌ನಲ್ಲಿ ೩೦ ಸಾವಿರ ರೂಪಾಯಿ ಗಳಿದ್ದುದು ಈಗ ೬೧ ಸಾವಿರ ರೂಪಾಯಿಗಳಾಗಿವೆ, ಆದ್ದರಿಂದ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ೮೭,೫೦೦ ರೂಪಾಯಿಗಳು ಮಂಜೂರಾಗಿವೆ. ಹಣವನ್ನು ಇದಕ್ಕೆ ಬಹಳ ಶೀಘ್ರವಾಗಿ ಒದಗಿಸಿ ಕೆಲಸವನ್ನು ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎ.ಜಿ. ಕೊಡಗಿ.— ಇದರಲ್ಲಿ ಮೊದಲನೆ ಹಂತದ ಕೆಲಸವನ್ನು ೧೯೭೨ರಲ್ಲಿ ಮಂಜೂರು ಮಾಡಿದ್ದೀರಿ. ಎರಡನೆ ಹಂತದ ಕೆಲಸವನ್ನು ೧೯೭೨-೭೮ರಲ್ಲಿ ಮಂಜೂರು ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ಐ.ಸಿ.ಆರ್.ಸಿ. ಪ್ರೋಗ್ರಾಂನಲ್ಲಿ ಮಾಡತಕ್ಕಂಥಾದ್ದು ನಮ್ಮಲ್ಲಿ ಇಲ್ಲ. ೭೨ನೇ ಇಸವಿಯಲ್ಲಿ ತೆಗೆದುಕೊಂಡಿರುವಂತಹ ಐ.ಸಿ.ಆರ್.ಸಿ. ರಸ್ತೆಗಳನ್ನು ಆರ್ಧಂಬರ್ಧ ಮಾಡಿ ಬಿಟ್ಟಿದ್ದಾರೆ. ಮತ್ತೆ ಎರಡನೆ ಹಂತವಾಗಿ ಮಂಜೂರು ಮಾಡಿದ್ದೆಂಥು ಹೇಳಿದ್ದೀರಲ್ಲಾ ಅದನ್ನು ಕ್ಲಾರಿಫೈ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ೧೯೭೨ನೇ ಇಸವಿಯಲ್ಲಿ ಐ.ಸಿ.ಆರ್.ಸಿ. ಪ್ರೋಗ್ರಾಂನಲ್ಲಿ ತೆಗೆದು ಕೊಂಡಿರುವಂತಹ ರಸ್ತೆಗಳು ಇವು. ರೋಡಿಗೆ ಸಂಬಂಧಪಟ್ಟ ಹಾಗೆ ೩-೪ ಹಂತಗಳು ಬರುತ್ತವೆ. ಫಾರ್ಮೇಷನ್, ಕನ್‌ಸ್ಟ್ರಕ್ಷನ್, ಸಿ.ಡಿ. ವರ್ಕ್ಸ್, ಡ್ರೈನೇಜ್ ಮತ್ತು ಕಲ್‌ವರ್ಟ್ಸ್ ಈ ರೀತಿಯಾಗಿ ಕೆಲವು ಹಂತಗಳಿವೆ. Sofar as taking over of these roads are concerned, in the year 1972 itself, that order has been passed i.e., to take up 21,000 and odd K.M.S. of roads. ೨೧,೭೨೨ ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಆಜ್ಞೆ ಮಾಡಿದ್ದರೂ ಹಣ ಸಿಕ್ಕಹಾಗೆ ಹಂತ ಹಂತವಾಗಿ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

(High School at Yeshwantapura, Bangalore)

597. SRI P. RAMDEV (Malleswaram).—Will the Minister for Municipal Administration be pleased to state.-

(*a*) whether it is a fact that the Commissioner of Corporation has bypassed the instructions given by the Administrator of the Bangalore City Corporation for starting a high school in Yeswathapur during the current year;

(*b*) whether the Government intend to meet the needs of 2 lakhs of residents of this area consisting of labourers, poor and harijans, for a Government or Corporation High School, in Yeswanthapur?

SRI H.C. SRIKANTAIAH (Minister for Municipal Administration)

(*a*) No decision has been taken by the Administrator for establishment of a High School in Yeswanthapur.

(*b*) No